ದಿನಾಂಕ 18-07-2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಿ ಮುಖ್ಯ ವಿಚಾರಣೆಗೆ ಒಳಪಡಿಸಲಾಯಿತು.

**ಮುಖ್ಯ ವಿಚಾರಣೆಃ** ವಾದಿ ಪರವಾಗಿ ಶ್ರೀ. ಎಸ್ ಕೆ ಕೆ ವಕೀಲರಿಂದ.

ಈ ದಾವೆಯಲ್ಲಿ ನಾನು ವಾದಿಯಾಗಿದ್ದು ಇಂದು ನಾನು ಮಾನ್ಯ ನ್ಯಾಯಾಲಯಕ್ಕೆ ನನ್ನ ಮುಖ್ಯ ವಿಚಾರಣೆ ಬದಲಿಗೆ ಪ್ರಮಾಣ ಪತ್ರವನ್ನು ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದಿರುವ ಎಲ್ಲ ಅಂಶಗಳು ಸತ್ಯವಾಗಿರುತ್ತವೆ ಮತ್ತು ಸದ್ರಿ ಅಂಶಗಳನ್ನು ಓದಿ ತಿಳಿದುಕೊಂಡು ಸಹಿ ಮಾಡಿರುತ್ತೇನೆ.

ನಾನು ಈ ದಿನ ಮಾನ್ಯ ನ್ಯಾಯಾಲಯಕ್ಕೆ ಸರ್ವೇ ನಂಬರ 154/3 ಬ ರ ಪಹಣಿ ಪತ್ರಿಕೆ, ಎಮ್ ಆರ್ ನಂಬರ ಟಿ 41, ದಿನಾಂಕ 05-05-2022 ರ ಕ್ರಯ ಪತ್ರದ ದೃಢಿಕೃತ ನಕಲು, ದಿನಾಂಕ 22-11-2014 ರ ನೋಂದಾಯಿತ ಹಿಂಪಡೆಯಲಾಗದ ಸಾಮಾನ್ಯ ಮುಕ್ತ್ಯಾರನಾಮ ರ ದೃಢಿಕೃತ ನಕಲು (ನಕಲಿಗಾಗಿ ಸಲ್ಲಿಸಿದ ಅರ್ಜಿಗೆ ನೀಡಿದ ಚಲನ ಕಾಫಿ ಒಳಗೊಂಡಿರುತ್ತದೆ), ದಿನಾಂಕ 18-07-2022 ರಂದು ವಾದಿಯರಿಗೆ ನೀಡಿದ ನಾಲ್ಕು ಆದೇಶ ಪ್ರತಿಯನ್ನು ಹಾಜರುಡಿಪಸಿರುತ್ತೇನೆ. ಮೇಲಿನ ದಾಖಲೆಗಳನ್ನು ಕ್ರಮವಾಗಿ ನಿಪಿ 1 ರಿಂದ 8 ಎಂದು ಗುರುತಿಸಲಾಯಿತು. ಆದ್ದರಿಂದ ನನ್ನ ದಾವೆಯನ್ನು ಡಿಕ್ರಿ ಮಾಡಲು ಕೋರುತ್ತೇನೆ.

**ಪಾಟೀ ಸವಾಲುಃ** ಪ್ರತಿವಾದಿಗಳು ಪ್ರತಿವಾದ ಪತ್ರ ಸಲ್ಲಿಸದೇ ಇರುವುದರಿಂದ ಪಾಟೀ ಸವಾಲನ್ನು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

ಓ.ಹೆ.ಕೇ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾದಂ., ಹಳಿಯಾಳ.